**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 748/2022**

| | | | |
|---|---|---|---|
| **ಹೆಸರು** | : | **ತುಳಸಿರಾಮ** | **ದೋ.ಸಾ. 04** |
| **ತಂದೆಯ ಹೆಸರು** | : | **ಪುಂಡಲೀಕರಾವ** | **ಪ್ರಾ.ಸಾ. 07** |
| **ವಯಸ್ಸು** | : | **34 ವರ್ಷ** | **ದಿನಾಂಕಃ 01-02-2023** |
| **ಉದ್ಯೋಗ** | : | **ವ್ಯವಸಾಯ** | |
| **ವಾಸಸ್ಥಳ** | : | **ಚಿಂಚೋಳಿ** | |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ.

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ಮತ್ತು 5 ರಿಂದ 10 ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ. ಸದರಿ ಘಟನೆ ಯಾರ ತಪ್ಪಿನಿಂದ ಆಯಿತು ಮತ್ತು ಅದರಲ್ಲಿ ಯಾರ್ಯಾರು ಗಾಯಗೊಂಡರು ಎಂದು ನನಗೆ ಗೊತ್ತಿಲ್ಲ.

ಪೋಲೀಸರು ಈ ಪ್ರಕಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 14-08-2021 ರಂದು ಸಂಜೆ 05-30 ಗಂಟೆಗೆ ನಾನು ಮತ್ತು ನನ್ನ ಮನೆಯ ಅಕ್ಕ ಪಕ್ಕದ ಮನೆಯವರಾದ ಚಾಸಾ-5 ರವರು ಮನೆಯ ಹತ್ತಿರ ಇದ್ದಾಗ ಚಿಂಚೋಳಿ-ನೀಮಾಹೊಸ್ಸಚಳ್ಳಿ ಮಾರ್ಗಕ್ಕೆ ಅಡ್ಡಲಾಗಿ ಕಟ್ಟುತ್ತಿದ್ದ ಮಲ್ಲಾಮುರಿ ಸೇತುವೆ ಬಿದ್ದಂತೆ ಸಪ್ಪಳ ಆಯಿತು ಎಂದರೆ ಸರಿ. ಅಲ್ಲಿಗೆ ನಾನು ಮತ್ತು ಚಾಸಾ-5 ರವರು ಹೋಗಿ ನೋಡಲಾಗಿ ಹಲವಾರು ಕಾರ್ಮಿಕರು ಕೆಳಕ್ಕೆ ಬಿದ್ದಿದ್ದರು ಅವರ ಮೈ ಕೈ ಗಾಯ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಿನಾಂಕ 15-08-2021 ರಂದು ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಇನ್ನೂಳಿದ ಹೇಳಿಕೆಯನ್ನು ಸ.ಸ.ಅ. ರವರು ಸಾಕ್ಷಿಗೆ ಓದಿ ಹೇಳುತ್ತಾರೆ. ಅದನ್ನು ಕೇಳಿಸಿಕೊಂಡ ಸಾಕ್ಷಿ, ಈಗ ನೀವು ನನಗೆ ಓದಿ ಹೇಳಿದ ರೀತಿಯ ಯಾವುದೇ ಹೇಳಿಕೆಯನ್ನು ನಾನು ಪೋಲಿಸರ ಮುಂದೆ ಕೊಟ್ಟಿಲ್ಲ ಎನ್ನುತ್ತಾರೆ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಪಿ-7 ಎಂದು ಗುರುತಿಸಲಾಯಿತು.

ನಿಪಿ-7 ರಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ಕೆ. ವಕೀಲರಿಂದಃ ಇಲ್ಲಾ**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**